**ಸಾಕ್ಷಿಯನ್ನು ದಿನಾಂಕಃ 12.01.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಮಾನ್ಯ ಸರ್ಕಾರಿ ವಕೀಲರಿಂದಃ**

ನಾನು ಜವರಯ್ಯ, ದಾಸಯ್ಯ ಮತ್ತು ಪುಟ್ಟಯ್ಯರವರ ಬದಲಾಗಿ ಮೇಟಿಕುಪ್ಪೆಯ ಸೋಮಣ್ಣ, ಗುರುಮಲ್ಲಪ್ಪ ಮತ್ತು ಉಮೇಶ್ ರವರನ್ನು ಬಳಸಿಕೊಂಡು ಕ್ರಯ ಪತ್ರಗಳನ್ನು ಆಕ್ರಮವಾಗಿ ಸೃಷ್ಟಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ಜವರಯ್ಯರವರ ಮಗ ಜವರಾಜಿ ಎಂಬುವವರು ತನ್ನ ತಂದೆ ಮೃತಪಟ್ಟಿದ್ದರೂ ಕೂಡ ತನ್ನ ತಂದೆಯ ಬದಲಿಗೆ ಬೇರೊಬ್ಬ ವ್ಯಕ್ತಿಯನ್ನು ಸೃಷ್ಟಿ ಮಾಡಿ ನನ್ನ ತಂದೆಗೆ ಸೇರಿದ ಸ.ನಂ. 6/5 ಪಿಗೆ ಸಂಬಂಧಿಸಿದ ಜಮೀನನ್ನು ನನ್ನ ಹೆಸರಿಗೆ ಆಕ್ರಮವಾಗಿ ಕ್ರಯ ಪತ್ರ ಮಾಡಿಸಿಕೊಂಡಿರುತ್ತೇನೆಂದು ತಹಸೀಲ್ದಾರ್ ರವರಿಗೆ ದೂರು ನೀಡಿರುತ್ತೇನೆಂದರೆ ಸರಿಯಲ್ಲ. ಮೇಟಿಕುಪ್ಪೆಯ ಸೋಮಣ್ಣ, ಗುರುಮಲ್ಲಪ್ಪ ಮತ್ತು ಉಮೇಶ್ ರವರನ್ನು ಸಾಕ್ಷಿದಾರರನ್ನಾಗಿ ವಿಚಾರಣೆಗೊಳಪಡಿಸಲು ನನ್ನದೇನು ಅಭ್ಯಂತರವಿಲ್ಲ. ದಾವಾ ಸ್ವತ್ತು ಅರಣ್ಯ ಇಲಾಖೆಯ ಸ್ವಾಧೀನದಲ್ಲಿರುವುದರಿಂದ ಕಂದಕ ತೆಗೆಯಲು ನಾನೇ ಅರಣ್ಯಾಧಿಕಾರಿಗಳಿಗೆ ತೊಂದರೆ ಕೊಟ್ಟಿರುತ್ತೇನೆ ಮತ್ತು ನಾನು ಯಾವತ್ತೂ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ನಾನು ದಿವಾನಿ ಪ್ರಕ್ರಿಯ ಸಂಹಿತೆ ಕಲಂ 80 ರ ನಿಬಂಧನೆಗಳನ್ನು ಪೂರೈಸಿಲ್ಲವಾದ್ದರಿಂದ ನಾನು ಈ ದಾವೆಯಲ್ಲಿ ಕೇಳಿರುವಂತಹ ಯಾವುದೇ ಪರಿಹಾರ ಪಡೆಯಲು ನಾನು ಅರ್ಹನಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿಲ್ಲದೇ ಇರುವುದರಿಂದ ನಾನು ದಾವಾ ಸ್ವತ್ತಿನಲ್ಲಿ ಯಾವುದೇ ಬೆಳೆಯನ್ನು ಬೆಳೆಯುವ ಪ್ರಶ್ನೆಯ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ನಾನು ಅರ್ಥಿಕವಾಗಿ ಮತ್ತು ರಾಜಕೀಯವಾಗಿ ಬಲಾಢ್ಯನಾಗಿದ್ದರೂ ಕೂಡ ನನ್ನ ವಾದ ಪತ್ರದಲ್ಲಿ ಬಡ ಕೃಷಿಕನಾಗಿರುತ್ತೇನೆಂದು ಸುಳ್ಳು ಅಂಶಗಳನ್ನು ಬರೆಸಿರುತ್ತೇನೆಂದರೆ

ಸರಿಯಲ್ಲ. ನಾನು ಹಾಜರುಪಡಿಸಿರುವ ಕ್ರಯ ಪತ್ರಗಳು ಸೃಷ್ಟಿ ಮಾಡಿಕೊಂಡಿರುವ ಕ್ರಯ ಪತ್ರಗಳಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಅರಣ್ಯ ಇಲಾಖೆಗೆ ಸೇರಿದ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ದಾಖಲೆಗಳನುನ ಸೃಷ್ಟಿ ಮಾಡಿ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಮಾಲೀಕನಲ್ಲ ಮತ್ತು ನಾನು ಯಾವತ್ತೂ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿಲ್ಲ ಮತ್ತು ನಾನು ಹಾಜರುಪಡಿಸಿರುವ ದಾಖಲೆಗಳು ಪ್ರತಿವಾದಿಗಳಿಗೆ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**